<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ. **70/2025**</u>

ಚಾಸಾ-6 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 28-11-2025

| | | |
|---|---|---|
| ಹೆಸರು | : | ಶ್ರೀಕಾಂತ |
| ತಂದೆಯ ಹೆಸರು | : | ನಿಂಗಪ್ಪ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಅಂಕಲಗಾ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ನಾನು ಹವಳಗಾದ ಸಕ್ಕರೆ ಕಾರ್ಖಾನೆಯಲ್ಲಿ ಕಂಪ್ಯೂಟರ ಆಪರೇಟರ ಆಗಿ 15 ದಿನಗಳ ಕಾಲ ಕೆಲಸ ಮಾಡಿರುತ್ತೇನೆ. ಆನಂತರ ನಾನು ಅಲ್ಲಿ ಕೆಲಸ ಬಿಟ್ಟಿರುತ್ತೇನೆ.

ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

2013 ನೇ ಇಸವಿಯಲ್ಲಿ ನಾನು ಹವಳಗಾದ ಸಕ್ಕರೆ ಕಾರ್ಖಾನೆಯಲ್ಲಿ ಕಂಪ್ಯೂಟರ ಆಪರೇಟರ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. 1 ನೇ ಆರೋಪಿ ಮತ್ತು ಚಾಸಾ 7, 8 ರವರು ನನ್ನ ಬಳಿ ಕೆಲಸ

ಮಾಡುತ್ತಿದ್ದರು ಎಂದರೆ ನನಗೆ ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. 5 ನೇ ಆರೋಪಿ ಮತ್ತು ಚಾಸಾ 4 ಮತ್ತು 5 ರವರು ಫ್ಯಾಕ್ಟರಿ ವಾಹನಗಳಿಗೆ ಹಾಕಿದ ಡಿಸೇಲ ಸ್ಲಿಪ ಇಂಡೆಂಟಗಳನ್ನು ಸಹಿ ಮಾಡಿ ಕಳುಹಿಸುತ್ತಿದ್ದರು ಎಂದರೆ ಸರಿ. ಇಂಡೆಂಟ ಸ್ಲಿಪಗಳ ಜೊತೆಗೆ ಕಂಪ್ಯೂಟರ ಬಿಲ್ಲುಗಳನ್ನು ವಾಹನದ ಚಾಲಕರಿಗೆ ತೆಗೆದು ಆಯಾ ಪೆಟ್ರೋಲ ಬಂಕಗಳಿಗೆ ಸಂಬಂಧಿಸಿದ ಪೆಟ್ರೋಲ ಬಂಕಗಳಲ್ಲಿ ಡಿಸೇಲ ಹಾಕಿಸಿಕೊಳ್ಳಲು ನೀಡಲಾಗುತ್ತಿತ್ತು ಎಂದರೆ ಸರಿ. 1 ರಿಂದ 5 ನೇ ಆರೋಪಿತರು ಶಾಲಾ ವಾಹನದಲ್ಲಿಟ್ಟ 20 ಇಂಡೆಂಟ ಸ್ಲಿಪಗಳನ್ನು ಕಳುವು ಮಾಡಿ ಅವುಗಳನು ದುರುಪಯೋಗಿ ಪಡಿಸಿಕೊಂಡು ಕೊಟ್ಟಿ ಬಿಲ್ಲು ತಯಾರಿಸಿ 2265 ಲೀಟರ ಡಿಸೆಲ ತೆಗೆದುಕೊಂಡು ಬೇರೆ ಕಡೆಗೆ ಮಾರಾಟ ಮಾಡಿ 1,19,051/- ರೂ. ಗಳನ್ನು ಪಡೆದುಕೊಂಡು ಕಾರ್ಖಾನೆಗೆ ದ್ರೋಹ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **PBP** ಪರವಾಗಿ **D.K.** ವಕೀಲರಿಂದಃ-</u>

ಪಾಟೀಸವಾಲು ಇಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ